(b) The action taken by the Government to prevent large scale smuggling of timber from Government forests in Belthangady Taluk?

SRI JIVIJEYA (Minister of State for Forests).—

(a) About 65 families have encroached forest land in Patrame of Belthangadi Taluk. illegally. They have destroyed the tree growth in the encroached portion by girdling and setting fire, and have cultivated lemon grass, citronella grass and topioca etc. Their houses have not been burnt or damaged and the agricultural crops have not been destroyed with the help of police forcibly. These unauthorised encroachers have been served with notices to vacate the area.

(b) Timely action has been taken from time to time to book the cases against the people indulging in illegal cutting of trees and smuggling of forest produces. During 1982—83 up-to-date, 272 forest offence cases have been detetcted by the department in Belthangady Taluk and action taken.

Close vigil is maintained by deploying protective staff at strategic points and through intensive patrolling by forest mobile squad.

Short Notice Question.—

Sub.—Officers Suspended/Reinstated in Public Works and Belthangady Irrigation Department.—

25. SRI. GOVIND P. VADEYARAJ (Kamalapur).—Will the Minister for Public Works and Irrigation be pleased to state.—

(a) the number of Engineers in Public Works and Irrigation Department (from Executive Engineer level to the Chief Engineer level) suspended during the past three years till the end of February 1983, on account of deriliction of duties, trap cases, raids on their respective residences and possessing wealth disproportionate to the known sources of ncome,

(b) out of th m the number of persons reinstated till today,

(c) out of them whether any such Engineer is promoted after reinstatement,

(d) the number of persons on whom prosecution have been launched;

(e) the stage at which the prosecution stands),

(f) whether it is not a fact that some of such suspended Engineer are reinstrated, even though presecution is pending against them in criminal courts till today;

(g) if so, the names of such engineers ?

SRI H. D. DEVEGOWDA (Minister for Public Works and Irrn.)—

(a) 24, the break up is as under.—

Chief Engrs	...	2
Suptdg. Engrs.	...	7
Exe. Engrs.	...	15

(b) 10 officers have been reinstated. 7 officers (1 CE, 3 SEs and 3 EEs) retired from service while under suspension.

(c) One officer was promoted from the cadre of EE to SE after reinstatement during this period.

(d) Sanction has been accorded under Section 197 of the Cr. PC read with Section 6 of the Prevention of Corruption Act. to prosecute 9 officers (1 CE. 3 SEs and 5 EEs)

(e) Information regarding stage of prosecution in individual cases is not readily available.

(f) Yes. 2 Engineers have been reinstated after sanction has been accorded to prosecute them.

(g) (a) Shri G. Venkatesh, SE.

(b) Shri Mohd. Yousuff. EE.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ ಸಸ್‌ಪೆಂಡ್ ಮಾಡಿದ ಮೇಲೆ ಪುನರ್ ನೇಮಕ ಮಾಡಿಕೊಳ್ಳುವುದು ಒಂದು ಹಂತ. ಆ ನಂತರ ತನಿಖೆ ಮಾಡುವುದು ಮತ್ತೊಂದು ಹಂತ, ಹಾಗಿದ್ದರೂ ಕೂಡ ಅನೇಕ ಮೊಕದ್ದಮೆಗಳು ಕೋರ್ಟಿನಲ್ಲಿ ಇದ್ದು ಇತ್ಯರ್ಥವಾಗದಿದ್ದರೂ ಕೂಡ ಅವರನ್ನು ಮತ್ತೆ ಪುನರ್ ನೇಮಕ ಮಾಡಿಕೊಂಡಿದ್ದಾರೆ ಎನ್ನುವ ಮಾತನ್ನು ಮಾನ್ಯಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಸುಮಾರು ೨೪ ಜನರನ್ನು ಸಸ್‌ಪೆಂಡ್ ಮಾಡಿದ್ದೀರಿ. ಆದರೆ ೧೦ ಜನರನ್ನು ಮಾತ್ರ ಪುನರ್ ನೇಮಕ ಮಾಡಿಕೊಂಡು ಇನ್ನು ಉಳಿದ ೧೪ ಜನರನ್ನು ಹಾಗೆ ಸಸ್‌ಪೆಂಡ್‌ನಲ್ಲಿ ಇಟ್ಟಿದ್ದೀರಿ, ಇದಕ್ಕೆ ಕಾರಣವೇನು ? ಇನ್ನು ಉಳಿದಂಥ ೧೪ ಜನರನ್ನು ಕೂಡ ತಾವು ಪುನರ್ ನೇಮಕ ಮಾಡಿಕೊಳ್ಳುವುದಕ್ಕೆ ಏನ್ನು ತೊಂದರೆ ಇದೆ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಪುನರ್ ನೇಮಕ ಮಾಡಿಕೊಳ್ಳುವುದಕ್ಕೆ ನನಗೇನೂ ತೊಂದರೆ ಇಲ್ಲ. ಆದರೆ ತೊಂದರೆ ಬಂದಿರುವುದು ಕಾನೂನಿನ ಅಡಚಣೆ ಆಪ್ಷೆಂ ಸ್ವಾಮಿ ಸಸ್‌ಪೆಂಡ್ ಆಗಿರುವಂಥದ್ದರ ಫೈಲ್ ನನ್ನ ಹತ್ತಿರ ಇದೆ, ಅದರಲ್ಲಿ ವಿವಿಧ ರೀತಿಯ ಮೊಕ್ಕದ್ದಮೆಗಳು ಇದ್ದು ಆ ಮೊಕ್ಕದ್ದಮೆಗಳ ಮೇಲೆ ಸಸ್‌ಪೆಂಡ್ ಮಾಡಿರುವವರನ್ನು ಪುನರ್ ನೇಮಕ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಕೆಲವು ಮೊಕದ್ದಮೆಗಳಲ್ಲಿ ಇನ್‌ಕಮ್ ಟ್ಯಾಕ್ಸ್‌ನವರು ಮನೆಗಳನ್ನು ರೈಡ್ ಮಾಡಿದ್ದಾರೆ, ಕೆಲವು ಮೊಕದ್ದಮೆಗಳಲ್ಲಿ ಸ್ಟೇಟ್ ವಿಜಿಲೆನ್ಸ್ ಡಿಪಾರ್ಟ್‌ಮೆಂಟ್‌ನವರು ರೈಡ್ ಮಾಡಿದ್ದಾರೆ. ಮತ್ತೆ ಕೆಲವು ಮೊಕದ್ದಮೆಗಳಲ್ಲಿ ಅಧಿಕಾರಿಗಳು ಹಣವನ್ನು ತೆಗೆದುಕೊಳ್ಳುತ್ತಿದ್ದಾಗ ಸಿಕ್ಕಿಬಿದ್ದು ಸಸ್‌ಪೆಂಡ್ ಆಗಿರುವಂಥದ್ದು ಇದೆ. ಕೆಲವು ಮೊಕದ್ದಮೆಗಳಲ್ಲಿ ಓವರ್-ಮೆಜರ್‌ಮೆಂಟ್ ಮಾಡಿ ಸಸ್‌ಪೆಂಡ್ ಮಾಡಿದ್ದಾರೆ. ಮತ್ತೆ ಕೆಲವು ಮೊಕದ್ದಮೆಗಳಲ್ಲಿ ತಪ್ಪು ಕ್ಲಾಸಿಫಿಕೇಷನ್ ಮಾಡಿ ಸಸ್‌ಪೆಂಡ್ ಆಗಿದ್ದಾರೆ. ಇನ್ನು ಅನೇಕ ರೀತಿಯ ಮೊಕದ್ದಮೆಗಳು ಇದ್ದು ಆ ಮೊಕದ್ದಮೆಗಳಿಗೆ ಸಂಬಂಧಪಟ್ಟಂತೆ ಸಸ್‌ಪೆಂಡ್ ಮಾಡಲಾಗಿದೆ. ಈಗ ನನ್ನ ಹತ್ತಿರ ಇರುವುದು ೧೯೮೦ನೇ ಇಸವಿಯಿಂದ ೧೯೮೨ನೇ ಇಸವಿಯವರೆಗೆ. ಇದರಲ್ಲಿ ಚೀಫ್ ಇಂಜಿನೀಯರ್‌ನಿಂದ ಹಿಡಿದು ಜೂನಿಯರ್ ಇಂಜಿನೀಯರ್‌ವರೆಗೂ ಇದೆ. ಆದರೆ ಮಾನ್ಯ ಸದಸ್ಯರು ಏನೊಂದು ಅಲ್ಪಕಾಲಾವಧಿ ನೋಟೀಸ್‌ನ್ನು ಕೊಟ್ಟಿದ್ದಾರೆ, ಆದಕ್ಕೆ ನಾನು ಈ

ಸದನದ ಮುಖೇನ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದು ಏನೆಂದರೆ ನಾವು ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ನನ್ನ ಮುಂದೆ ಒಬ್ಬ ಅಧಿಕಾರಿಯನ್ನು ಪುನರ್ ನೇಮಕ ಮಾಡಬೇಕೆಂದು ಒಂದು ಫೈಲ್ ಬಂತು. ಆ ಫೈಲ್‌ನ್ನು ನೋಡಿ ಆ ಅಧಿಕಾರಿಯನ್ನು ಪುನರ್ ನೇಮಕ ಮಾಡಬಾರದೆಂದು ಹೇಳಿ ಆ ಫೈಲ್‌ನ್ನು ವಾಪಸ್ಸು ಕಳುಹಿಸಿದ್ದೇನೆ. ಕಾರಣವೇನೆಂದರೆ ಇದರ ಬಗ್ಗೆ ಸರ್ಕಾರ ಯಾವುದಾದರೊಂದು ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಯಾವುದಾದರೊಂದು ದೃಢವಾದಂಥ ನೀತಿಯನ್ನು ಅನುಸರಿಬೇಕೆಂದು ಹೇಳಿ ನಾನು ಆ ಫೈಲ್‌ನ್ನು ವಾಪಸ್ ಕಳುಹಿಸಿದ್ದೇನೆ. ಕೆಲವು ಜನ ವ್ಯಕ್ತಿಗಳ ಆಧಾರದ ಮೇಲೆ ನಾವು ಅಧಿಕಾರಿಯನ್ನು ಪುನರ್ ನೇಮಕ ಮಾಡಿಕೊಳ್ಳಬಾರದೆಂದು ತಿಳಿಸಿದ್ದೇನೆ.

ಹಿಂದೆ ನಾನು ಆ ಕಡೆ ಕುಳಿತುಕೊಂಡಿದ್ದಾಗ ಅನೇಕ ಸಾರಿ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ತಾರತಮ್ಯ ಮಾಡಿದ್ದಾರೆಂದು ಹೇಳಿದ್ದೇನೆ, ಮನಸ್ಸಿಗೆ ಬಂದಂತೆ ವರ್ತನೆ ಮಾಡಿದ್ದಾರೆಂದು ಹೇಳಿದ್ದೇನೆ, ಕೆಲವರನ್ನು ಸಸ್‌ಪೆಂಡ್ ಮಾಡಿ ಆದನ್ನು ರಿವೋಕ್ ಮಾಡಿ ಪ್ರಮೋಷನ್ ಕೊಟ್ಟಿದ್ದಾರೆಂದು ವಾದ ಮಾಡಿದ್ದೇನೆ. ಕೆಲವ ಜನ ಅಧಿಕಾರಿಗಳ ಮೇಲೆ ಮೊಕದ್ದಮೆಗಳು ಇಲ್ಲದೆ ಇದ್ದರೂ ಕೂಡ ಪುನರ್ ನೇಮಕ ಮಾಡಿಲ್ಲವೆಂದು ಕೂಡ ನಾನು ಅತ್ಯಂತ ಗುರುತರವಾದಂಥ ಆಪಾದನೆಯನ್ನು ಮಾಡಿದ್ದೇನೆ. ಆದ್ದರಿಂದ ಈಗ ಸರ್ಕಾರ ಈ ವಿಷಯದ ಬಗ್ಗೆ ಯಾವುದಾದರೊಂದು ದೃಢವಾದಂಥ ನೀತಿಯನ್ನು ಅನುಸರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಮನಸ್ಸಿಗೆ ಬಂದಂತೆ ವರ್ತನೆ ಮಾಡಬಾರದೆಂದು ತಿಳಿದುಕೊಂಡು ನಿಜ ಪರಿಸ್ಥಿತಿಯೆನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅನೇಕ ಆಪಾದನೆಗಳ ಮೇಲೆ ಕೆಲವು ಜನ ಅಧಿಕಾರಿಗಳನ ಸಸ್‌ಪೆಂಡ್ ಮಾಡಿದ್ದಾರೆ. ಆದರೆ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಗ ಮನೆಗಳ ಮೇಲೂ ಕೂಡ ಇನ್‌ಕಮ್ ಟ್ಯಾಕ್ಸ್‌ನವರು ಮತ್ತು ಸ್ಟೇಟ್ ವಿಜಿಲೆನ್ಸ್‌ನವರು ರೈಡ್ ಮಾಡಿದ್ದಾರೆ. ಆದರೆ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳನ್ನು ಮಾತ್ರ ತಮ್ಮ ಸರ್ಕಾರ ಸಸ್‌ಪೆಂಡ್ ಮಾಡಿ ಈ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಮಾತ್ರ ಸಸ್‌ಪೆಂಡ್ ಮಾಡಿದ್ದೀರಿ, ಇದಕ್ಕೆ ಕಾರಣ ವೇನು ? ಇದು ಡಿಸ್‌ಕ್ರಿಮಿನೇಷನ್ ಅಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ನನ್ನ ಮುಂದೆ ಇರತಕ್ಕಂಥದ್ದು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಮನೆಗಳನ್ನು ರೈಡ್ ಮಾಡಿರತಕ್ಕಂಥದ್ದು ಅಲ್ಲ. ಆ ರೀತಿಯ ಗುರುತರ ವಾದಂಥ ಆಪಾದನೆಗಳ ಪಟ್ಟಿ ನನ್ನ ಮುಂದೆ ಈಗ ಇಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಯಾರನ್ನು ಸಸ್‌ಪೆಂಡ್ ಮಾಡಲಾಗಿದೆ, ಅಂಥವರ ಪಟ್ಟಿಯನ್ನು ನಾನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಮಾನ್ಯಮಂತ್ರಿಗಳು ಹೇಳಿದರು ಕೆಲವು ಸಿಂಗಲ್ ಕೇಸ್‌ಗಳಲ್ಲಿ ಯಾವ ಚಾರ್ಜಸ್ಸ್ ಇಲ್ಲದೆ ಇದ್ದರೆ ಅಂಥ ಕೇಸ್‌ಗಳ ಅಧಿಕಾರಗಳನ್ನು ನಾವು ಪುನರ್ ನೇಮಕ ಮಾಡಿಕೊಂಡಿದ್ದೇವೆಂದು. ಆದರೆ ಯಾವ ಚಾರ್ಜಸ್ಸ್ ಇಲ್ಲದೆ ಇದ್ದು ಡಿಸ್‌ಕ್ರಿಮಿನೇಷನ್ ಮಾಡಿರುವುದನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ —ನಾನು ಯಾವುದು ಕೇಸ್‌ನ್ನು ಪುನರ್ ನೇಮಕ ಮಾಡಿಲ್ಲ ಹಿಂದಿನ ಸರ್ಕಾರ ಕೆಲವು ಮೊಕದ್ದಮೆಗಳಲ್ಲಿ ಪ್ರಾಸಿಕ್ಯೂಷನ್ ನಡೆಯುತ್ತಿದ್ದರೂ ಕೂಡ ಪುನರ್ ನೇಮಕ ಮಾಡಿಕೊಂಡು ಅವರಿಗೆ ಪ್ರಮೋಷನ್ ಸಹ ಕೊಟ್ಟಿದ್ದಾರೆ. ಆದರೆ ಇವತ್ತು ನಾವು ಎಲ್ಲರಿಗೂ ಒಂದೇ ರೀತಿಯಾಗಿ ಮಾಡಬೇಕೆಂದು ಹೊರಟರೆ. ಈಗ ನೇಮಕ ಮಾಡಿಕೊಂಡಿರುವವರನ್ನು ಮತ್ತೆ ವಾಪಸ್ ಕಳುಹಿಸಬೇಕಾಗುತ್ತದೆ. ಮತ್ತೆ ಅವರನ್ನು ಸಸ್‌ಪೆಂಡ್ ಮಾಡುವುದು ಸರಿಯೇ ? ಇವತ್ತು ಶಾವೆಲ್ಲಪ್ಪ ಒಪ್ಪಿಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಿಲ್ಲ. ಕೆಲವು ಕೇಸ್‌ಗಳಲ್ಲಿ ಪ್ರಾಸಿಕ್ಯೂಷನ್ ಒಂದು ಕಡೆ ನಡೆಯುತ್ತಿದ್ದು ಅವರು ಕೆಲಸ ಮಾಡಿ ಕೊಂಡಿದ್ದರೆ ಮುಂದೆ ಕೋರ್ಟಿನ ತೀರ್ಮಾನ ಏನಾಗುತ್ತದೆಯೋ ನೋಡೋಣ. ಇವತ್ತು ನಾನು ಅಧಿಕಾರಕ್ಕೆ ಬಂದ ಮೇಲೆ ನಾನು ಯಾರನ್ನು ಪುನರ್ ನೇಮಕ ಮಾಡುವುದಕ್ಕೆ ಒಪ್ಪಿಕೊಂಡಿಲ್ಲ. ಒಂದು ವೇಳೆ ಒಪ್ಪಿಕೊಂಡು ಮನಸ್ಸಿಗೆ ಬಂದಕೆ ವರ್ತನೆ ಮಾಡಿದರೆ ನಾಳೆ ನೀವೇ ನನ್ನ ಮೇಲೆ ಗುರುತರ ವಾದಂಥ ಆಪಾದನೆಯನ್ನು ಮಾಡಬಹುದು. ಆ ರೀತಿಯ ಆಪಾದನೆಯನ್ನು ಮಾಡಿಸಿಕೊಳ್ಳುವುದಕ್ಕೆ ನನಗೆ ಇಚ್ಛೆ ಇಲ್ಲ. ಈ ೫ ಶ್ರೇಣಿಗಳಲ್ಲಿಯೂ ಕೂಡ ಯಾವುದಾವರೊಂದು ನಿಲುವನ್ನು ಸರ್ಕಾರ

ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದೆ. ಸಸ್‌ಪೆಂಡ್ ಆದಂಥ ಅಧಿಕಾರಿಗಳ ಬಗ್ಗೆ ಕೋರ್ಟಿನಲ್ಲಿ ಪ್ರಾಸಿಕ್ಯೂಶನ್ ನಡೆಯುತ್ತಿದ್ದರೆ ಸರ್ಕಾರ ಅದರಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದಕ್ಕೆ ಹೋಗುವುದಿಲ್ಲ.

ಅಂತಹ ಅಧಿಕಾರಿಗಳನ್ನು ಪುನರ್ ನೇಮಕ ಮಾಡಿ ಯಾವುದಾದರೂ ಜವಾಬ್ದಾರಿ ಇಲ್ಲದೇ ಇರ ತಕ್ಕಂಥ, ಪ್ರಾಮುಖ್ಯತೆ ಇಲ್ಲದಿರುವ ಸ್ಥಳಗಳಿಗೆ ನೇಮಕ ಮಾಡಿದ್ದರೂ. ತನಿಖೆ ನಡೆದು ಕೋರ್ಟಿನಲ್ಲಿ ಪ್ರಾಸಿಕ್ಯೂಶನ್ ಆದ ಮೇಲೆ ಅದು ನೀಡುವ ತೀರ್ಪಿಗೆ ಅವರು ಬದ್ಧರಾಗಿರಬೇಕು–ಇದರ ಬಗ್ಗೆ ಅಂತಿಮ ವಾಗಿ ಸರ್ಕಾರ ಯಾವ ನಿರ್ಣಯವನ್ನೂ ಮಾಡಿಲ್ಲ.

ಕೆ. ಎಚ್. ರಂಗನಾಥ್.— ಈಗ ಅವರ ಗೊತ್ತಾದ ವರಮಾನಕ್ಕಿಂತ ಹೆಚ್ಚು ಆಸ್ತಿ ಮಾಡಿದ್ದಾರೆ ಎಂಬ ಆಪಾದನೆ ಮೇಲೆ ಎಷ್ಟು ಜನ ಅಧಿಕಾರಿಗಳು ತಪ್ಪಿತಸ್ಥರೆಂದು ಕಂಡುಬಂದಿದ್ದಾರೆ ? ಮತ್ತೆ ಇವರು ಎಷ್ಟು ವರ್ಷಗಳಿಂದ ಅಮಾನತ್ತಿನಲ್ಲಿದ್ದಾರೆ ? ಅಥವಾ ವಿಚಾರಣೆ ನಡೆದಿದ್ದರೆ ಅದು ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ. — ಪ್ರತಿಯೊಂದು ಕೇಸಿನಲ್ಲೂ ಓದಬೇಕು ಎಂದರೆ ನಾನು ಅದರ ಪಟ್ಟಿ ಮಾಡಿಲ್ಲ. ೧೯೮೦ ರಿಂದ ೮೨ರವರೆಗೆ ವಿವರಣೆ ಬೇಕಾದರೆ ತರಿಸಿಕೊಡುತ್ತೇನೆ. ಸುಮಾರು ಅಧಿಕಾರಿಗಳು ಇದ್ದಾರೆ. ವಿವರಗಳನ್ನು ಬೇಕಾದರೆ ಒದಗಿಸುತ್ತೇನೆ. ಇದರ ಬಗ್ಗೆ ನನಗೆ ಆತಂಕ ವೇನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ — ಈಗ ಜಾಗೃತ ಆಯೋಗದವರು ಕೆಲವು ಕೇಸುಗಳಲ್ಲಿ ಏಕರೀತಿಯ ಆಪಾದನೆ ಇರುವಂತಹ ಅಧಿಕಾರಿಗಳಿಗೆ ಅಂದರೆ ಸೂಪರಿಂಟೆಂಡಿಂಗ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಚೀಫ್ ಇಂಜೀನಿಯರ್ ಇವರುಗಳ ಮೇಲೆ ಯಾವುದೇ ಆಪಾದನೆ ಇದ್ದರೂ ಕೂಡ ಕೆಲವರನ್ನು ಪುನರ್ ನೇಮಕ ಮಾಡಿ ಎಂದು ಬರೆಯುತ್ತಾರೆ. ಕೆಲವರಿಗೆ ಪ್ರಾಸಿಕ್ಯೂಷನ್ ಮಾಡಿ ಎಂದು ಬರೆದರೆ, ಕೆಲವರಿಗೆ ಮಾಡಬಾರದು ಎಂದು ಬರೆಯುತ್ತಾರೆ. ಚಾರ್ಜ್‌ಶೀಟ್ ಹಾಕಿದರೂ ಕೂಡ ಅದನ್ನು ತೆಗೆಯಿರಿ ಎಂದು ಬರೆಯುತ್ತಾರೆ. ಇದನ್ನು ತಾವು ಯಾವ ರೀತಿ ಸರಿಪಡಿಸುತ್ತೀರಿ ? All are involved in one case or the other .. You are also not acting according to law. You do not want to give justice..... ಕೆಲವರಿಗೆ ನೌಕರಿಯನ್ನು ಕೊಡಬಾರದು ಎಂದು ಬರೆದಿದ್ದಾರೆ. ಏಕೆಂದರೆ ಅವರಿಗೆ ಯಾವ ಪುಲ್‌ಅಪ್ ಇಲ್ಲ, ರಾಜಕೀಯ ಒತ್ತಡ ಇಲ್ಲ. ಅದಕ್ಕೆ ಅವರು ಅಲ್ಲೆ ಉಳಿದಿದ್ದಾರೆ. ಇನ್ನು ಕೆಲವರಿಗೆ ಬೇರೆ ರೀತಿ ಮಾಡುತ್ತಾರೆ, ಈ ರೀತಿ ತಾರತಮ್ಯ ಏಕೆ ?

ಶ್ರೀ ಹೆಚ್. ಡಿ. ದೇವೇಗೌಡ — ಮಾನ್ಯ ಅಧ್ಯಕ್ಷರೇ ಇದು ಬಹಳ ಜಟಿಲವಾದ ಪ್ರಶ್ನೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾರಿಗೆ ಪ್ರಭಾವ ಇಲ್ಲವೋ, ಅಂತಹವರನ್ನು ಕಾಪಾಡಬೇಕೆನ್ನುವುದೇ ನಮ್ಮ ಸರ್ಕಾರದ ಇರಾದೆ. ಯಾರು ವಿಧಾನಸೌಧದ ಮೂರನೇ ಮಹಡಿಯ ವರೆಗೆ ಬಂದು ಪ್ರಭಾವ ಬೀರುತ್ತಾರೋ ಅಂತಹ ಇಂಡಿವಿಜ್ಯುಯಲ್ ಕೇಸ್‌ಗಳಿಗೆ ಪುನರ್ ನೇಮಕ ಮಾಡುವುದಿಲ್ಲ ಎಂದು ನಾನು ಬರೆದಿದ್ದೇನೆ. ನನಗೆ ಯಾವ ಮುಚ್ಚುಮರೆಯೂ ಇಲ್ಲ. ನಾನು ಇಪ್ಪತ್ತು ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿರುವಾಗ ನನಗೆ ಯಾವ ಅಳುಕೂ ಇಲ್ಲ. ಅಧಿಕಾರಿಗಳು ಯಾವಾಗಲೂ ಒಂದು ಯೂನಿಫಾರಂ ಡಿಸಿಪ್ಲಿನ್ ತೆಗೆದುಕೊಳ್ಳಬೇಕೆಂಬುದೇ ನನ್ನ ಉದ್ದೇಶ. ಪ್ರಭಾವವಿರುವವರು ಏಳು ದಿವಸಕ್ಕೆ ಪುನರ್ ನೇಮಕ, ಪ್ರಮೋಷನ್ ತೆಗೆದುಕೊಂಡಿದ್ದಾರೆ. ಜಾಗೃತ ಆಯೋಗದವರು ಪುನರ್ ನೇಮಕ ಮಾಡುವುದು ಬೇಡ ಎಂದು ಹೇಳಿದ್ದರೂ ಪುನರ್ ನೇಮಕ ಮಾಡಿದ್ದಾರೆ. ಸತ್ಯಾಂಶಗಳು ಸಹ ಈ ಫೈಲ್‌ನಲ್ಲಿದೆ. ನಾನು ಯಾರ ಮೇಲೂ ದೋಷ ಹಾಕುವುದಕ್ಕೆ ಹೋಗುವುದಿಲ್ಲ. ತಪ್ಪಿತಸ್ಥರನ್ನು ಕಾಪಾಡಬೇಕೆಂಬ ಉದ್ದೇಶ ನಮಗೆ ಇಲ್ಲ. ಜಾಗೃತ ಆಯೋಗಕ್ಕೆ ಬರೆದು, ಅಲ್ಲಿ ಅಧಿಕಾರಿಗಳ ತನಿಖೆ ಮುಗಿಸಿ ಹೇಳಬೇಕು ಎಂದರೆ ವಿಳಂಬವಾಗುತ್ತದೆ. ಕೆಲವು ಅಧಿಕಾರಿಗಳ ವಿಷಯದಲ್ಲಿ ೧-೨ ವರ್ಷಗಳಿಂದಲೂ ತನಿಖೆ ಇನ್ನೂ ನಡೆಯುತ್ತಿದೆ. ತನಿಖೆ ಮುಗಿಸುವುದಕ್ಕೆ ಸಾಧ್ಯವಾಗಿಲ್ಲ. ಹಲವಾರು ಅಧಿಕಾರಿಗಳ ಸೇವೆಯನ್ನು ಅಮಾನತ್ತಿನಲ್ಲಿಡಲಾಗಿದೆ. ಇದರಿಂದಾಗಿ ಅವರಿಗೆ ಮಾನಸಿಕ ವೇದನೆ ಇದೆ. ಇದರ ಬಗ್ಗೆ ಸಾಕಷ್ಟು ಗೊಂದಲ ಇದೆ, ಇದರ ಬಗ್ಗೆ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳಬೇಕೆಂದು ಸರ್ಕಾರದ ಇರಾದೆ ಇದೆಯೆಂದು ಹೇಳಲು ಬಯಸುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಜಾಗೃತ ಆಯೋಗದವರು ಬೇಡ ಎಂದು ಹೇಳಿದರೂ ಕೂಡ ಕೆಲವರನ್ನಷ್ಟೆ ಪುನರ್ ನೇಮಕ ಮಾಡಿದ್ದಾರೆಂದು ಮಾನ್ಯ ಸಚಿವರು ಹೇಳಿದರು. ಅಂತಹವರಲ್ಲಿ ಕೆಲವರನ್ನು ಪ್ರಮೋಟ್ ಕೂಡ ಮಾಡಿದ್ದಾರೆ. ಆದರೆ ಐ. ಪಿ. ಎಸ್., ಐ. ಎ, ಎಸ್. ಅಧಿಕಾರಿಗಳ ಮನೆಗಳಲ್ಲಿ ರೈಡ್ ಆದರೂ ಕೂಡ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ತಮ್ಮ ಜಾತಿಗೆ ಸೇರಿದವರು, ತಮ್ಮ ಅನುಕೂಲಕ್ಕೆ ಇರತಕ್ಕಂಥವರನ್ನು ಜಾಗೃತ ಆಯೋಗದವರು ಬೇಡ ಎಂದರೂ ಕೂಡ ಪುನರ್ ನೇಮಕ ಮಾಡಿದ್ದಾರೆ. ಅವರ ಜಾತಿಯವರು ಅಲ್ಲದವರು, ಅವರ ಸಂಬಂಧಿಕರು ಅಲ್ಲದವರು ಎರಡು ವರ್ಷಗಳಿಂದಲೂ ಕೊಳೆಯುತ್ತಿದ್ದಾರೆ. ಸರ್ಕಾರದ ನಿಯಮದ ಪ್ರಕಾರ ಮೂರು ಅಥವಾ ಆರು ತಿಂಗಳಲ್ಲಿ ತನಿಖೆ ಮುಗಿಸಿ ಪುನರ್ ನೇಮಕ ಮಾಡಬೇಕೇ ಬೇಡವೇ ಎಂದು ನಿರ್ಧರಿಸಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಈಗ ಹೇಳಿದರು ಏನೆಂದರೆ ಇದರಿಂದ ಕೆಲವರಿಗೆ ಮಾನಸಿಕ ವೇದನೆಯಾಗುತ್ತದೆ. ಆದ್ದರಿಂದ ಸಮಂಜಸವಾದ ಒಂದು ಸೂತ್ರವನ್ನು ವಿಪ್ಪಾಡು ಮಾಡುತ್ತೇವೆ ಎಂದು. ಈ ತರಹ ಡಿಸ್ಕ್ರಿಮಿನೇಷನ್ ಮಾಡಿದ್ದಾರೆ ಉದಾಹರಣೆಗೆ ಹೇಳುವುದಾದರೆ ವೆಂಕಟರಮಣಪ್ಪ ಎನ್ನುವವ ಚೀಫ್ ಇಂಜಿನಿಯರ್ ಇವರ ವಿಷಯದಲ್ಲಿ ಎರಡು ವರ್ಷಗಳಿಂದಲೂ ತನಿಖೆ ಮುಗಿದಿಲ್ಲ, ಯಾರದೋ ಅವರಿಗೆ ಬೇಕಾದವರ ಮನೆಯಲ್ಲಿ ಸಿಕ್ಕಿದ ಮಾಹಿತಿಯ ಮೇಲೆ ಇವರನ್ನು ಸಸ್ಪೆಂಡ್ ಮಾಡಿದ್ದಾರೆ, ಇನ್‌ಕಮ್ ಟ್ಯಾಕ್ಸ್ ಕಮಿಷನರ್‌ರವರು ರೈಡ್ ಮಾಡಿದ್ದಾರೆಂಬ ಕಾರಣದ ಮೇಲೆ ಇವರನ್ನು ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಪಿ. ರಾಮ್‌ದೇವ್.— ಅವರನ್ನು ಸಸ್ಪೆಂಡ್ ಮಾಡಿದ್ದು ಎರಡು ವರ್ಷಗಳ ಹಿಂದೆ ಅಲ್ಲವೇ ಆಗ ನೀವು ಅಧಿಕಾರದಲ್ಲಿದ್ದಿರಿ, ಆಗ ಅದರ ಬಗ್ಗೆ ಕೇಳಬೇಕಾಗಿತ್ತು.

ಶ್ರೀ ಗೋವಿಂದ ಪಿ. ಒಡೆಯರಾಜ್.— ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಸಂಬಂಧಪಟ್ಟ ಎಲ್ಲಾ ಫೈಲುಗಳನ್ನು ಈ ಸಭೆಯ ಮುಂದೆ ಇಡಬೇಕು. ಈ ಹಿನ್ನಲೆಯಲ್ಲಿ ಜನರಿಗೆ ಅನ್ಯಾಯವಾಗುತ್ತಿದೆ. ಇನ್‌ಕಮ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಕೊಟ್ಟಂತಹ ಆರ್ಡರನ್ನು ನೂನ್ಯ ಮಂತ್ರಿಗಳ ಕಡೆಗೆ ಕಳಿಸಿಕೊಡುತ್ತೇನೆ, ಅದೇ ತರಹ ಅನೇಕ ಜನರಿಗೆ ತೊಂದರೆಯಾಗಿದೆ. ಅದನ್ನು ಸರಿಪಡಿಸುವುದಕ್ಕೆ ಆದಷ್ಟು ಜಾಗ್ರತ ಕ್ರಮ ತೆಗೆದುಕೊಳ್ಳಬೇಕು ಇದರ ಬಗ್ಗೆ ನಿಜಾಂಶ ಏನು ಇದೆ, ಯಾವ ಜನರಿಗೆ ಪ್ರೊಟೆಕ್ಷನ್ ಕೊಟ್ಟಿದ್ದಾರೆ ಎಂಬುದು ಸ್ಪಷ್ಟ ಆಗ ಬೇಕಾದರೆ ಮತ್ತು ಅದರ ಬಗ್ಗೆ ಈ ಸದನಕ್ಕೆ ಗೊತ್ತಾಗಬೇಕಾದರೆ ಆ ಫೈಲನ್ನು ಸಭೆಯ ಮುಂದೆ ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹುಚ್ಚಮಾಸ್ತಿಗೌಡ,— ಮಾನ್ಯ ಸದಸ್ಯರು ಜಾಗೃತ ಆಯೋಗದ ಮೇಲೆ ನೇರವಾಗಿ ಆಪಾದನೆ ಮಾಡುತ್ತಿದ್ದಾರೆ, ಹಾಗೆ ನಡೆದುಕೊಂಡರೆ ಆಯೋಗದ ಕೆಲಸ ಕಾರ್ಯಗಳಲ್ಲಿ ಪ್ರವೇಶ ಮಾಡಿದಂತೆ ಆಗುತ್ತದೆ. ಈ ವಿಷಯವನ್ನು ಸರ್ಕಾರದವರು ದೃಷ್ಟಿಯಲ್ಲಿಟ್ಟು ಕೊಳ್ಳಬೇಕಾಗುತ್ತದೆ, ಆದರೆ ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ ಏನು ನಿರ್ದಿಷ್ಟವಾದ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ನಾನು ಸ್ಪಷ್ಟೀಕರಣ ಮಾಡುವುದು ಏನೆಂದರೆ, ಈ ಎರಡೂವರೆ ತಿಂಗಳಲ್ಲಿ ಯಾರನ್ನೂ ಪುನರ್‌ನೇಮಕ ಮಾಡಿಲ್ಲ. ಜಾತಿ ಆಧಾರದ ಮೇಲೂ ಪುನರ್ ನೇಮಕ ಮಾಡಿಲ್ಲ. ಮತ್ಯಾವುದೇ ಕಾರಣದ ಮೇಲೂ ಪುನರ್ ನೇಮಕ ಮಾಡಿಲ್ಲ. ಮಾನ್ಯ ಸದಸ್ಯರಾದಂತಹ ಮಲ್ಲಿಕಾರ್ಜುನ ಖರ್ಗೆಯವರು ಒಂದೇ ರೀತಿಯ ಕೇಸುಗಳಲ್ಲಿ ವಿಜಿಲೆನ್ಸ್ ಕಮಿಷನ್‌ನವರು ಕೊಟ್ಟಿರುವಂತಹ ಶಿಫಾರಸ್ಸುಗಳಲ್ಲಿ ವ್ಯತ್ಯಾಸ ಇರತಕ್ಕಂತಹದ್ದು ಸರ್ಕಾರದ ಗಮನಕ್ಕೆ ಬಂದಿದೆ ಅಂತ ಹೇಳಿದ್ದಾರೆ. ಆದರ ಬಗ್ಗೆ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ಇಲ್ಲಿ ವ್ಯಕ್ತಪಡಿಸುವುದಕ್ಕೆ ಹೋಗಲಿಲ್ಲ. ಆದರೆ ಅವರೂ ಕೂಡ ಸಚಿವ ಸಂಪುಟದಲ್ಲಿ ಸಂಪುಟದ ಸಚಿವರಾಗಿ ಕೆಲಸ ಮಾಡಿದ್ದಾರೆ. ಅದೇ ರೀತಿ ಶ್ರೀಮಾನ್ ಗಂಗನಾಥ್ ರವರು ಹಾಗೂ ಶ್ರೀಖೂನ್ ಸೊಯ್ಲಿಯವರೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದಂತಹವರು. ವಿಜಿಲೆನ್ಸ್ ಕಮಿಷನ್ ತನ್ನ ವರದಿಯನ್ನು ಕೊಟ್ಟ ಮೇಲೆ ಅದರ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವ ಹಕ್ಕು ಅಥವಾ ಅಧಿಕಾರ ಸರ್ಕಾರಕ್ಕಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ವಿಜಿಲೆನ್ಸ್ ಕಮಿಷನ್‌ನಲ್ಲಿ ಯಾರೂ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ತಿಳಿದಂತೆ ಬರೆಯುವುದಕ್ಕೆ ಸರ್ವ ಸ್ವಾತಂತ್ರ್ಯ ಇದೆ.

ಹಸ್ತಕ್ಷೇಪಕ್ಕೆ ಆಸ್ಪದ ಇಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಶ್ರೀಮಾನ್ ವಡೆಯರಾಜ್ ರವರು, ಶ್ರೀಮಾನ್ ವೆಂಕಟರಮಣಪ್ಪನವರ ಕೇಸ್‌ನಲ್ಲಿ ಆದಾಯ ತೆರಿಗೆ ಇಲಾಖೆಯವರು ಕೊಟ್ಟಂತಹ ನಿರ್ಣಯವನ್ನು ನನಗೆ ಕಳುಹಿಸಿ ಕೊಡುತ್ತೇನೆಂದು ಏನು ಹೇಳಿದ್ದಾರೆ. ಆದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದ ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ಏನೆಂದರೆ, ಸಂಬಂಧಪಟ್ಟ ಫೈಲ್‌ಗಳನ್ನು ಇಲ್ಲಿ ಇಡಬೇಕು ಎಂದು ಏನು ಹೇಳಿದರು ಆ ಫೈಲನ್ನು ಇಲ್ಲಿಡುವುದಕ್ಕೆ ನಾವು ಯಾರನ್ನೂ ಪುನರ್‌ನೇಮಕ ಮಾಡಿಯೇ ಇಲ್ಲ. ಹಿಂದಿನ ಸರ್ಕಾರ ಮಾಡಿದಂತಹ ನಿರ್ಣಯಗಳ ಫೈಲ್‌ಗಳನ್ನು ಇಡಬೇಕಾಗುತ್ತದೆ. ಆ ಫೈಲ್‌ಗಳನ್ನು ಇಡಬೇಕೆಂದು ಅಧ್ಯಕ್ಷರು ಹೇಳುವುದಾದರೆ ನಾನಂ ಇಡುವುದಕ್ಕೆ ಸಿದ್ದನಿದ್ದೇನೆ. ಇದ್ದಂತಹ ಸಸ್‌ಪೆನ್ಸ್‌ನ್‌ನ್ನು ರಿವೋಕ್ ಮಾಡಿ ರೀ ಇನ್ಸ್‌ಸ್ಟೇಟ್ ಮಾಡಿಲ್ಲ, ಮತ್ತು ಜಾತಿಯ ಆಧಾರದ ಮೇಲೆಯೂ ಮಾಡಿಲ್ಲ. ಸಸ್‌ಪೆನ್ಸನ್ ಜಾತೀಯ ಆಧಾರದ ಮೇಲೆ ಮಾಡಿದ್ದಾರೆಂದು ನಾನು ನಿಮಗಿಂತ ಹೆಚ್ಚಾಗಿ ಅಲ್ಲಿ ಕುಳಿತಂ ಕೆಲಸ ಮಾಡುವಂತಹ ಸಮಯದಲ್ಲಿ ಹೇಳಿ ಗಲಾಟೆ ಮಾಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.— ಗಲಾಟೆ ಮಾಡಿ ಅಲ್ಲಿ ಹೋದಮೇಲೆ ಸುಮ್ಮನೆ ಕುಳಿತಿದ್ದೀರಲ್ಲಾ ?

ಶ್ರೀ ಎಚ್. ಡಿ. ದೇವೇಗೌಡ.—ಇದ್ದಂತಹ ಅಮಾನತ್ತನ್ನು ತೆಗೆದು ತಾವು ಸಚಿವ ಸಂಪುಟದ ಸದಸ್ಯರಾಗಿದ್ದಾಗಲೇ ಕೆಲವರನ್ನು ಪುನರ್‌ನೇಮಕ ಮಾಡಿದ್ದೀರಿ ? ಅಮಾನತ್ತನ್ನು ರದ್ದುಪಡಿಸಿ ಪುನರ್‌ನೇಮಕ ಮಾಡುವಾಗ ಪೀಲವಾರು ಕಾರಣಗಳು ಇರಬೇಕು. ಆದರೆ ಎಲ್ಲಿ ಜಾತಿಯ ಆಧಾರದ ಮೇಲೆ ಪುನರ್‌ನೇಮಕವನ್ನೂ ಮಾಡಿದ್ದಾರೆ. ಆದರ ಬಗ್ಗೆ ನಾನು ಹೇಳತಕ್ಕಂಥದ್ದು ಏನೆಂದರೆ, ಈಗ ನಮ್ಮ ಮುಂದೆ ಇರತಕ್ಕಂತಹ ಒಟ್ಟು ಅಮಾನತ್ತು ಕೇಸುಗಳ ಬಗ್ಗೆ ಒಂದು ಪಾಲಿಸಿ ತೀರ್ಮಾನವನ್ನು ತೆಗೆದು ಕೊಳ್ಳಬೇಕಾಗುತ್ತದೆ. ಅದು ಈಗ ಚರ್ಚೆಯ ಹಂತದಲ್ಲಿದೆ ಎಂದು ಮಾತ್ರ ಈ ಸಂದರ್ಭದಲ್ಲಿ ಸ್ಪಷ್ಟ ಪಡಿಸುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಸಚಿವರು ಉತ್ತರ ಕೊಡುತ್ತ ಹೇಳಿದರು. ಎರಡೂ ವರೆ ತಿಂಗಳಲ್ಲಿ ಏನೂ ಆಗಿಲ್ಲ ಅಂತ. ಅದನ್ನು ನಾನು ಒಪ್ಪುತ್ತೇನೆ. ಆದರ ಬಗ್ಗೆ ನಾವು ಯಾರೂ ಪ್ರಸ್ತಾಪ ಕೂಡ ಮಾಡಲಿಲ್ಲ ಸಾಮಾನ್ಯವಾಗಿ ಮೂಲ ಭೂತವಾಗಿರತಕ್ಕಂತಹ ಪ್ರಶ್ನೆಯನ್ನು ತಮ್ಮ ಮುಂದಿಟ್ಟಿದ್ದಾರೆ. ೨–೩ ವರ್ಷಗಳ ಹಿಂದೆ ಅಂತಹ ಯಾವ ತಾರತಮ್ಯವನ್ನು ಸರ್ಕಾರ ಮಾಡಿದ್ದರೋ ಆ ರೀತಿ ಮಾಡಿದಂತಹ ನಿರ್ಣಯದ ಫೈಲನ್ನು ಸದನದ ಮುಂದಿಡಬೇಕೆಂದು ಹೇಳಿದರು. ಆ ರೀತಿಯ ಫೈಲನ್ನು ಇಡುವುದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಆದರೆ ಸಾಮಾನ್ಯವಾಗಿ ಯೂನಿಫಾರ್ಮಿಟಿ ಡಿಸಿಪಿಷನ್‌ನ್ನು ಹಿಂದಿನ ಸರ್ಕಾರವೂ ತೆಗೆದುಕೊಂಡಿತ್ತು. ವಿಜಿಲೆನ್ಸ್ ಕಮಿಷನ್ ಬಂದಮೇಲೆ ಯಾರೇ ಆಗಲಿ ತಪ್ಪಿತಸ್ಥರಿಗೆ ಶಿಕ್ಷೆ ನಿಸ್ಪಕ್ಷಪಾತವಾಗಿ ಆಗಬೇಕೆಂಬ ನೀತಿಯನ್ನು ಹಿಂದಿನ ಸರ್ಕಾರವೂ ಹೊಂದಿತ್ತು. ಅದರಲ್ಲೂ ತಾರತಮ್ಯವಾಗಿರತಕ್ಕಂತಹ ಕೇಸಂಗಳು ಇದ್ದರೆ ಮತ್ತು ಆ ರೀತಿ ತಮಗೆ ಕಂಡು ಬಂದಿದ್ದರೆ, ಆ ಫೈಲುಗಳನ್ನು ಸಹ ಇಲ್ಲಿ ಇಡುವುದಕ್ಕೆ ನಮ್ಮ ಅಡ್ಡಿ ಆತಂಕ ಏನೂ ಇಲ್ಲ.

ಶ್ರೀ ಗೋವಿಂದ ಪಿ ಒಡೆಯರಾಜ್.—ಈ ಕೇಸುಗಳ ಬಗ್ಗೆ ಯಾವ ರೀತಿ ವ್ಯವಹರಿಸಿದ್ದಾರೆ, ಮತ್ತು ಈ ಸಂಬಂಧದಲ್ಲಿ ಅಮಾನತ್ತು, ಪುನರ್ನೇಮಕ ಹಾಗೂ ಮುಂಬಡ್ತಿ ಕೊಡುವುದರಲ್ಲಿ ಯಾವ ರೀತಿ ಮಾಡಿದ್ದಾರೆಂಬುದು ಬಯಲಾಗಬೇಕಾಗಿದೆ. ಅದು ರಾಜ್ಯದ ಜನಗಳಿಗೆ ಗೊತ್ತಾಗಬೇಕು, ಅದಕ್ಕಾಗಿ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಫೈಲನ್ನು ಸದನದ ಮುಂದೆ ಇಡಬೇಕು. ಒಂದು ವೇಳೆ ಆ ಸಂಬಂಧಪಟ್ಟಂತಹ ಫೈಲನ್ನು ಇಲ್ಲಿ ಇಡದಿದ್ದರೆ, ಅವರಿಗೆ ಧೈರ್ಯ ಇಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ವಿಷಯದಲ್ಲಿ ಸದನದಲ್ಲಿ ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ. ಯಾರ ವೇಲೂ ಗೂಬೆಯನ್ನು ಕೂರಿಸಬೇಕು, ಅಥವಾ ದೋಷಾರೋಪಣೆ ಮಾಡಬೇಕೆಂಬುದು ನನ್ನ ಉದ್ದೇಶವಲ್ಲ. ಆದರೆ ನಾನು ಈ ಸದನದಲ್ಲಿ ಅಲ್ಲಿ ಕುಳಿತು ಕೆಲಸ ಮಾಡುವಂತಹ ಸಂದರ್ಭದಲ್ಲಿ ಆ ಮಾತನ್ನು ಹೇಳಿದ್ದೇನೆ. ಇಲ್ಲ ಅಂತ ಹೇಳುವುದಿಲ್ಲ. ಅಲ್ಲಿ ಕುಳಿತಾಗ ಒಂದು ಮಾತು, ಇಲ್ಲಿ ಕುಳಿತಾಗ ವರಸ್ತೊಂದು ಹೇಳಬಾರದು. ಆ ರೀತಿಯ ಅಭ್ಯಾಸ ನನಗಿಲ್ಲ ಕೆಲವು ಕೇಸುಗಳು ಕೋರ್ಟಿನಲ್ಲಿ, ತೀರ್ಮಾನವಾಗುವುದು ಬಹಳ ನಿಧಾನವಾಗುತ್ತದೆ. ರೀಇನ್ಸ್‌ಟೇಟ್ ಮಾಡುವುದಕ್ಕೆ ತೀರ್ಮಾನ ಮಾಡಿ ಎಂಬುದಕ್ಕೆ, ರೀಇನ್ಸ್‌ಟೇಟ್ ಮಾಡುವುದಕ್ಕೆ

ಸಾಧ್ಯವಿಲ್ಲ ಎಂಬ ದಾಗಿ ವಿಜಿಲೆನ್ಸ್ ಬರೆಯತಕ್ಕಂತಹದ್ದು, ಅದರ ಬಗ್ಗೆ ತಾರತಮ್ಯ ಇದೆ. ಅದರ ಬಗ್ಗೆ ಯಾವುದೇ ಒಬ್ಬ ವ್ಯಕ್ತಿಯ ಹೆಸರನ್ನು ತೆಗೆದು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಇದರಲ್ಲಿ ಏನಾದರೊಂದು ನಿಖರವಾದ ದೋರಣೆಯನ್ನು ತಾಳಿ ತೀರ್ಮಾನ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ರಾಮ್‌ದೇವ್‌ರವರು ಹೇಳಿದ ಹಾಗೆ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡುವುದಕ್ಕೆ ಹೊರಟಿದ್ದೇವೆ ಎನ್ನುವ ಸಾಮೂಹಿಕ ಅಪಾದನೆಯನ್ನು ಕೇಳುವುದಕ್ಕೆ ಸಿದ್ಧರಿಲ್ಲ. ಇವತ್ತು ಕೆಲವರು ೬ ತಿಂಗಳಿಗೆ ಮೇಲ್ಪಟ್ಟು ೨ ವರ್ಷ ೩ ವರ್ಷ ಇರಬಹುದು. ಇದರ ಬಗ್ಗೆ ಸರಿಯಾದಂತಹ ಪಾಲಿಸಿ ಡಿಸಿಸನ್ ಮಾಡಬೇಕಾಗಿದೆ. ಇದರಿಂದ ಅವರಿಗೆ ನಿಮ್ಮದಿ ಇಲ್ಲ. ಅಮಾನತ್ತಿನಲ್ಲಿರತಕ್ಕಂತಹ ಕೇಸುಗಳನ್ನು ರೀ ಇನ್ವೆಸ್ಟಿಗೇಟ್ ಮಾಡಿ, ಅವರ ಮೇಲೆ ತರತಕ್ಕಂತಹ ಪೊಕದ್ದಮೆಗಳು ಯಾವ ಕೊರ್ಟಿನಲ್ಲಾದರೂ ನಡೆದುಕೊಂಡು ಹೋಗುವುದಕ್ಕೆ ಆಕ್ಷೇಪಣೆಯನ್ನು ತರಬಾರದು. 2–3 ವರ್ಷ ಅಮಾನತ್ತಿನಲ್ಲಿಡತಕ್ಕಂತಹದ್ದು ಸರಿಯಾದುದಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಸರ್ಕಾರ ಈ ಬಗ್ಗೆ ಒಂದು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಆ ನಿರ್ಣಯವನ್ನು ಇನ್ನೂ ಮಾಡಿಲ್ಲ ವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಭೆಯ ಮುಂದೆ ರೆಕಾರ್ಡನ್ನು ಇಡಬೇಕೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಅದಕ್ಕೆ ತಾವು ಯಾವ ನಿಮಿಷದಲ್ಲಿ ಇಡಬೇಕೆಂದು ಹೇಳಿದರೂ ಆ ನಿಮಿಷದಲ್ಲಿ ಸದನದ ಮುಂದೆ ಸಂಬಂಧಪಟ್ಟ ರೆಕಾರ್ಡುಗಳನ್ನು ಇಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಈ ರೀತಿಯು ರೈಡ್ ಮಾಡಿದಾಗ ಲಕ್ಷಾಂತರ ರೂಪಾಯಿ ದುಡ್ಡು ಸಿಕ್ಕಿದೆ ಅಂತ ವರದಿ ಬಂದಿದೆ. ಅದು ಏನಾಯಿತು ಎಂಬುದಕ್ಕೆ ತಾವು ಉತ್ತರ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಡಿ. ದೇವೇಗೌಡ.—ಏನು ಸಿಕ್ಕಿದೆ ಎಂಬ ವಿಚಾರ ಈ ಫೈಲಿನಲ್ಲಿದೆ. ಪತ್ರಿಕೆಗಳಲ್ಲಿ ಬಂದದ್ದನ್ನು ನಾನೂ ನಿಮ್ಮ ಹಾಗೇ ಓದಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಹಿಂದಿನ ಸರ್ಕಾರದಲ್ಲಿದ್ದಂತಹ ಮಂತ್ರಿಗಳು ಆಯಾ ಇಲಾಖೆಯ ಅಧಿಕಾರಿಗಳಿಗೆ ತಿಂಗಳಿಗೆ ಇಂತಿಷ್ಟು ಹಣವನ್ನು ಕೊಡಬೇಕೆಂಬ ಪದ್ಧತಿಯನ್ನು ಅನುಸರಿಸಿದ್ದರು. ಆ ಪದ್ಧತಿಗನುಸಾರವಾಗಿ ಕೊಡದೇ ಇರತಕ್ಕಂತಹ ಅಧಿಕಾರಿಗಳನ್ನು ದುರುದ್ದೇಶದಿಂದ ಅಮಾನತಿನಲ್ಲಿಟ್ಟಿರತಕ್ಕಂತಹ ವಿಚಾರ ಈಗಿನ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಅದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೋ ಗೊತ್ತಿಲ್ಲ. ಆದರೆ ಅಂತಹ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಾರಾಸಗಟು ಈ ತರಹ ಹಿಂದಿನ ಸರ್ಕಾರದ ಮೇಲೆ ಆರೋಪಣೆಯನ್ನು ಯಾವುದೇ ಸದಸ್ಯರು ಮಾಡಬಾರದು. ನಿರ್ದಿಷ್ಟ ಕೇಸುಗಳು ಈ ತರಹದ್ದು ಇದ್ದರೆ ಅದನ್ನು ಬೇಕಾದರೆ ಹೇಳಲಿ. ಅದನ್ನು ಬಿಟ್ಟು ಸಾರಾಸಗಟು ಈ ರೀತಿಯ ಆರೋಪಣೆ ಮಾಡುವುದು ಸದನದ ಗಂಭೀರಕ್ಕೆ ತಕ್ಕುದಲ್ಲ ಎಂಬುದಾಗಿ ಹೇಳುತ್ತೇನೆ,

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಮಂತ್ರಿ ಲಿಖಿತ ಮೂಲಕ ಕೊಟ್ಟ ಉತ್ತರಗಳು.—

ಉಪಾಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

೪೫. ಶ್ರೀ ಗೋವಿಂದಗೌಡ (ಶೃಂಗೇರಿ).— ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ಉತ್ತರಿಸುವರೇ ?

(ಅ) ಮಲೆನಾಡಿನ ರೈತರಿಗೆ ಅತಿ ಮುಖ್ಯವಾಗಿ ದಿನ ನಿತ್ಯದ ಬಳಕೆಗೆ ಆಗತ್ಯವಿರುವ ಸೊಪ್ಪು ಸೌದೆ (ಕಟ್ಟಿಗೆ) ಯನ್ನು ಅರಣ್ಯದಿಂದ ಪಡೆಯಲು ಮತ್ತು ಉಪಯೋಗಿಸಲು ರಹದಾರಿ ನೀಡಲಾಗಿರುವುದೆ ?